Affiliating University-2025-2026

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577 007.

## ಕಾಲೇಜು ಅಭಿವೃದ್ಧಿ ಪರಿಷತ್

ಸಂಖ್ಯೆ:ದಾವಿವಿ/ಸಿಡಿಸಿ/149/2025-26 | 507 ದಿನಾಂಕ: 16 MAY 2025

Bapuji Institute of Hi-Tech Education, Davangere. 024 Date 17/5/25

### : ಕಛೇರಿ ಜ್ಞಾಪನ :

ವಿಷಯ : 2025-26ನೇ ಶೈಕ್ಷಣಿಕ ಸಾಲಿನ ಮುಂದುವರಿಕೆ ಸಂಯೋಜನೆ ನೀಡುವ ಬಗ್ಗೆ.

ಉಲ್ಲೇಖ :
1. ಕಾಲೇಜಿನ ಅರ್ಜಿ ಸಂಖ್ಯೆ: AFF/218/AF/P14GBH0090/2025-26/12012
2. ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿ ವರದಿ ದಿನಾಂಕ:04.12.2024.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:29.04.2025.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರಲ್ಲಿ ಕಾಲೇಜಿನ ಮುಂದುವರಿಕೆ ಸಂಯೋಜನೆ ಕುರಿತು ಸ್ಥಳೀಯ ತಪಾಸಣಾ ಸಮಿತಿಯು ನೀಡಿರುವ ಶಿಫಾರಸ್ಸನ್ನು ದಿನಾಂಕ:24.01.2025ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ದಿನಾಂಕ:21.01.2025ರಂದು ನಡೆದ ಸಿಂಡಿಕೇಟ್ ಸಭೆಗಳಲ್ಲಿ ಯಥಾವತ್ತಾಗಿ ಅನುಮೋದಿಸಲಾಗಿದೆ.

ಆದುದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ 59(17)ರ ಮೇರೆಗೆ, ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಹಾಗೂ ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳನ್ನು (Defined Parameters) ಕಡ್ಡಾಯವಾಗಿ ಅನುಷ್ಠಾನ/ಕಾರ್ಯಗತಗೊಳಿಸಿ, ಪೂರಕ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ದಿನಾಂಕ:30.07.2025ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಹಾಗೂ ಈ ಕೆಳಕಂಡ ಷರತ್ತಿಗೊಳಪಟ್ಟು, 2025-26ನೇ ಸಾಲಿನ ಅವಧಿಗೆ ಮಾತ್ರ ಈ ಕೆಳಕಂಡಂತೆ ತಾತ್ಕಾಲಿಕವಾಗಿ ಮುಂದುವರಿಕೆ ಸಂಯೋಜನೆಗೆ ಅನುಮತಿಸಲಾಗಿದೆ.

| ಕಾಲೇಜಿನ ಹೆಸರು: | | ಬಾಪೂಜಿ ಇನ್ಸಿಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್ ಕಾಲೇಜು, ದಾವಣಗೆರೆ. | | | |
|---|---|---|---|---|---|
| ಆನ್‌ಲೈನ್ ಸಂಯೋಜನಾ ಅಂಕಗಳು: | | 73.59% | | | |
| ಪದವಿ | ವಿಷಯ ಸಮೂಹ | ಭಾಷೆಗಳು | ಸಂಯೋಜನಾ ವಿಧ | ಪ್ರವೇಶ ಮಿತಿ | ವಿಭಾಗಗಳು |
| 1 | 2 | 3 | 4 | 5 | 6 |
| ಬಿ.ಕಾಂ. | ಕಡ್ಡಾಯ ವಿಷಯಗಳು | ಕನ್ನಡ, ಇಂಗ್ಲೀಷ್, ಹಿಂದಿ, ಸಂಸ್ಕೃತ, ಉರ್ದು, ಫಂಕ್ಷನಲ್ ಕನ್ನಡ | ಮುಂದುವರಿಕೆ (CTA) | 180 | 03 |
| ಬಿ.ಸಿ.ಎ | ಕಡ್ಡಾಯ ವಿಷಯಗಳು | | | 360 | 06 |

ಷರತ್ತುಗಳು:

1. ಸ್ಥಳೀಯ ವಿಚಾರಣೆ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿ ಅನುಪಾಲನಾ ವರದಿಯನ್ನು ದಿನಾಂಕ:30.07.2025ರೊಳಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು. ಅನುಪಾಲನಾ ವರದಿಯನ್ನು ಸಲ್ಲಿಸದಿದ್ದಲ್ಲಿ ದಂಡಶುಲ್ಕ ವಿಧಿಸುವ ಜೊತೆಗೆ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

2. ಜಾರಿಯಲ್ಲಿರುವ ಅನ್ವಯವಾಗುವ ಸರ್ಕಾರದ/ವಿಶ್ವವಿದ್ಯಾನಿಲಯ/ಯು.ಜಿ.ಸಿ/ಎ.ಐ.ಸಿ.ಟಿ/ಎನ್.ಸಿ.ಟಿ.ಇ ನಿಯಮಾವಳಿ ಆದೇಶಗಳು ಹಾಗೂ ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
3. ಯಾವುದೇ ಕೋರ್ಸ್‌ಗೆ/ಕೋರ್ಸ್‌ಗಳಿಗೆ ವಿಶ್ವವಿದ್ಯಾನಿಲಯದ ಪೂರ್ವಾನುಮತಿಯಿಲ್ಲದೇ ವಿಭಾಗಗಳನ್ನು ಹೆಚ್ಚಿಸಬಾರದು.
4. ಪ್ರವೇಶ ಮತ್ತು ಇತರೆ ಶುಲ್ಕಗಳನ್ನು ವಿಶ್ವವಿದ್ಯಾನಿಲಯವು ನಿಗಧಿಪಡಿಸಿದ ದರದಲ್ಲಿ ವಿದ್ಯಾರ್ಥಿಗಳಿಂದ ಪಡೆದುಕೊಂಡು ವಿಶ್ವವಿದ್ಯಾನಿಲಯಕ್ಕೆ ನಿಗದಿತ ದಿನಾಂಕದೊಳಗೆ ಪಾವತಿಸತಕ್ಕದ್ದು.
5. ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಸಲುವಾಗಿ ಕಾಲೇಜಿನಲ್ಲಿ ಶೈಕ್ಷಣಿಕ, ಬೋಧನಾ ಕ್ರಮವನ್ನು ಉತ್ತಮಪಡಿಸತಕ್ಕದ್ದು.
6. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 61ರ ಮೇರೆಗೆ, ಈ ಮೇಲ್ಕಂಡಂತೆ ಕಲಂ 5ರಲ್ಲಿ ನಿಗದಿಪಡಿಸಿರುವ ಪ್ರವೇಶಮಿತಿಗಿಂತ ಹೆಚ್ಚುವರಿ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ನಿಗದಿತ ವಿದ್ಯಾರ್ಥಿ ಪ್ರವೇಶ ಮಿತಿಯ ಪ್ರಮಾಣವನ್ನು ಮೀರಿದ್ದಲ್ಲಿ ಹೆಚ್ಚುವರಿ ಪ್ರವೇಶ ಪ್ರಮಾಣಕ್ಕೆ ವಿಶ್ವವಿದ್ಯಾನಿಲಯ ಅಂಗೀಕಾರ ನೀಡುವುದಿಲ್ಲ.
7. ಆನ್‌ಲೈನ್ ಮೂಲಕ ಮುಂದುವರಿಕೆ ಸಂಯೋಜನೆಗೆ ಬೇಕಾದ ಕನಿಷ್ಠ ಅಂಕಗಳು ಕಡಿಮೆ ಇದ್ದಲ್ಲಿ ಸದರಿ ಮಾನದಂಡಗಳ ಅಂಕಗಳನ್ನು ಹೆಚ್ಚಿಸುವ ಕುರಿತು ಕ್ರಮವಹಿಸತಕ್ಕದ್ದು.
8. ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳ (Defined Parameters) 08 ಅಂಶಗಳನ್ನು ಪೂರೈಸುವುದು ಹಾಗೂ ಕಾಲೇಜು/ಸಂಸ್ಥೆಯು ವಿಶ್ವವಿದ್ಯಾಲಯದ 2025-26ನೇ ಸಾಲಿನ ಸಂಯೋಜನೆ ಅಧಿಸೂಚನೆ ದಿನಾಂಕ: 22.10.2024ರ ಕಂಡಿಕೆ 01ರಲ್ಲಿ ಸೂಚಿಸಿರುವ ಜಮೀನಿನ ಕುರಿತಂತೆ ನೀಡಿರುವ ಸೂಚನೆಗಳನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.
9. ಈ ಕೆಳಕಂಡ ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳನ್ನು (Defined Parameters) ಪೂರೈಸಿರುವುದಿಲ್ಲ. ಸದರಿ ನಿಗದಿತ ಮಾನದಂಡಗಳನ್ನು ಮುಂದಿನ ಒಂದು ಶೈಕ್ಷಣಿಕ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಸದರಿ ಮಾನದಂಡಗಳನ್ನು ಅನುಷ್ಠಾನಗೊಳಿಸಿದ್ದಕ್ಕೆ 2026-27ನೇ ಸಾಲಿಗೆ ಪ್ರವೇಶಾತಿ ಪಡೆಯುವ ಮುನ್ನ ವರದಿಯನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಅನುಷ್ಠಾನಗೊಳಿಸದೇ ಇದ್ದ ಪಕ್ಷದಲ್ಲಿ ಪ್ರಥಮ ವರ್ಷದ ಪದವಿಗಳಿಗೆ ಪ್ರವೇಶಾತಿಯನ್ನು ನಿಷಿದ್ಧಗೊಳಿಸಲಾಗುವುದು. ಅಂತಹ ಸಂದರ್ಭದಲ್ಲಿ ದ್ವಿತೀಯ ಮತ್ತು ತೃತೀಯ ಪದವಿ ವಿದ್ಯಾರ್ಥಿಗಳು ತಮ್ಮ ಅಂತಿಮ ಪದವಿ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಕಾಲೇಜನ್ನು ನಡೆಸಲು ಅವಕಾಶ ನೀಡಲಾಗುವುದು. ನಂತರ ಕಾಲೇಜಿಗೆ ನೀಡಲಾಗಿರುವ ಸಂಯೋಜನೆಯನ್ನು ರದ್ದುಪಡಿಸಲಾಗುವುದು.
10. 2026-27ನೇ ಶೈಕ್ಷಣಿಕ ಸಾಲಿಗೆ ಕೋರ್ಸ್‌ಗಳ ಸಂಯೋಜನಾ ನವೀಕರಣಕ್ಕೆ ಕಾಲೇಜು ತಪ್ಪದೆ ಸಂಯೋಜನಾ ಅರ್ಜಿಯನ್ನು ಸಲ್ಲಿಸತಕ್ಕದ್ದು.
11. ಐದು ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ನ್ಯಾಕ್(NAAC)ಅನುಮೋದನೆಯನ್ನು ಕೂಡಲೇ ಪಡೆದುಕೊಳ್ಳತಕ್ಕದ್ದು.
12. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಉಪನ್ಯಾಸಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು.
13. ಸಂಯೋಜನೆಗೆ ಸಂಬಂಧಿಸಿದಂತೆ ಸಲ್ಲಿಸಿರುವ ಮಾಹಿತಿಯಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಕೆವಿಸ್‌ಯು ಸೆಕ್ಷನ್ ಪ್ರಕಾರ 63ರಡಿ ಕ್ರಮ ಕೈಗೊಳ್ಳಲಾಗುವುದು.
14. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾನಿಲಯವು ಅನುಮೋಧಿಸುವವರೆಗೆ ಅಥವಾ 06 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ.

15. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದ್ದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ: ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೇಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.

ವಿ.ಸೂ:–ಕಾಲೇಜು ಯಾವುದೇ ಕಾರಣಕ್ಕೂ ವಿಶ್ವವಿದ್ಯಾನಿಲಯವು ಪ್ರವೇಶಾತಿಗೆ ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಯಾವುದೇ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದಲ್ಲ.

ಆನ್‌ಲೈನ್ ಸಂಯೋಜನಾ ಅಂಕಪಟ್ಟಿ ಲಗತ್ತಿಸಿದೆ.

ಆದೇಶದ ಮೇರೆಗೆ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಗೆ,

1. ಪ್ರಾಂಶುಪಾಲರು, ಬಾಪೂಜಿ ಇನ್ಸ್ಟಿಟ್ಯೂಟ್ ಆಫ್ ಹೈ–ಟೆಕ್ ಎಜುಕೇಷನ್ ಕಾಲೇಜು, ಲೇಕ್ ವ್ಯೂ ಕ್ಯಾಂಪಸ್, ಎಸ್.ಎಸ್. ಬಡಾವಣೆ, ಶಾಮನೂರು ರಸ್ತೆ, ದಾವಣಗೆರೆ.–577004.

2. ಕಛೇರಿ ಪ್ರತಿ.